ಆತನ ಹೆಸರು ನೀಲ್ ಹರ್ಬಿಸನ್. ಸಂಗೀತ ಮತ್ತು ಚಿತ್ರಕಲೆ ಎಂದರೆ ನೀಲ್‌ಗೆ ಇನ್ನಿಲ್ಲದ ಆಸಕ್ತಿ. ದುರದೃಷ್ಟವಶಾತ್, ಕಿರಿಯ ವಯಸ್ಸಿನಲ್ಲೇ 'ಆಕ್ರೊಮೆಟೋಪ್ಸಿಯ' ಎಂಬ ತೀವ್ರತರದ ಬಣ್ಣಗುರುಡಿನ ಸಮಸ್ಯೆಗೆ ತುತ್ತಾದ ನೀಲ್‌ಗೆ ಬಣ್ಣಗಳ ನಡುವಿನ ವ್ಯತ್ಯಾಸವೇ ತಿಳಿಯುತ್ತಿರಲಿಲ್ಲ. ಎಲ್ಲವೂ ಬೂದು ಬಣ್ಣದಂತೆ ಕಾಣುತ್ತಿತ್ತು. ಹೇಗಾದರೂ ಮಾಡಿ ಈ ತೊಂದರೆಯಿಂದ ಪಾರಾಗಬೇಕು ಎಂದು ನಿರ್ಧರಿಸಿದ ಆತ, ತನ್ನ ಸ್ನೇಹಿತ ಆಡಮ್‌ನ ಸಹಾಯದೊಂದಿಗೆ ಬಣ್ಣಗಳನ್ನು ಶಬ್ದದ ಕಂಪನಗಳನ್ನಾಗಿ ಪರಿವರ್ತಿಸುವ ಆಂಟೆನಾವೊಂದನ್ನು ತಯಾರಿಸಿದ. ಅದನ್ನು ತನ್ನ ತಲೆಯ ಹಿಂಬದಿಯ ಕೆಳಭಾಗದಲ್ಲಿ ಶಸ್ತ್ರಚಿಕಿತ್ಸೆಯ ಮೂಲಕ ಶಾಶ್ವತವಾಗಿ ಅಂಟಿಸಿಕೊಂಡ. ಅಂದಿನಿಂದ ನೀಲ್ ಆಂಟೆನಾದ ಸಹಾಯದಿಂದ ಎಲ್ಲ ಬಣ್ಣಗಳನ್ನು ಗುರುತಿಸುತ್ತಾನೆ. ಸಾಮಾನ್ಯ ಕಣ್ಣುಗಳು ಗ್ರಹಿಸಲಾಗದ ಇನ್ಫ್ರಾರೆಡ್ ಮತ್ತು ಅತಿ ನೇರಳೆ ಬಣ್ಣಗಳನ್ನು ಗುರುತಿಸುವ ಅಪರೂಪದ ಶಕ್ತಿ ಪಡೆದಿದ್ದಾನೆ. ಆಂಟೆನಾದಲ್ಲಿ ಅಡಕವಾಗಿರುವ 'ಆರ್‌ಎಫ್‌ಐಡಿ' ತಂತ್ರಜ್ಞಾನದ ಮೇಲೆ ಕೆಲಸ ಮಾಡುವ ಚಿಪ್, ನೇರವಾಗಿ ಇಂಟರ್ನೆಟ್ ಸಂಪರ್ಕ ಹೊಂದಬಲ್ಲ ಶಕ್ತಿ ಹೊಂದಿದ್ದು ಸ್ಯಾಟಲೈಟ್ ಸಂಪರ್ಕವನ್ನೂ ಸಾಧಿಸುತ್ತದೆ. ಮೊಬೈಲ್ ಫೋನ್ ಸಹಾಯವಿಲ್ಲದೆ ನೇರವಾಗಿ ಮೆದುಳಿಗೇ ಸಂದೇಶ ಪಡೆಯಬಲ್ಲ ಶಕ್ತಿ ಹೊಂದಿರುವ ನೀಲ್, ಎಲೆಕ್ಟ್ರೊಮ್ಯಾಗ್ನೆಟಿಕ್ ತರಂಗಗಳನ್ನು ಹೊಮ್ಮಿಸುವ ಯಾವುದೇ ವಸ್ತುವಿನಿಂದ ಹೊಮ್ಮುವ ತರಂಗಗಳನ್ನು ಶಬ್ದದ ರೂಪದಲ್ಲಿ ಕೇಳಿಸಿಕೊಳ್ಳಬಲ್ಲ. ಅಪರೂಪದ ತಂತ್ರಜ್ಞಾನ ಹೊಂದಿರುವ ನೀಲ್‌ನನ್ನು ವಿಶ್ವದ ಪ್ರಥಮ 'ಸೈಬೋರ್ಗ್' ಎಂದು ಅಧಿಕೃತವಾಗಿ ಗುರುತಿಸಲಾಗಿದೆ.

ಈ ಹೆಸರನ್ನು ಗಮನಿಸಿ. ಮಿಯಾವ್ ಲುಡೊ ಡಿಸ್ಕೊ ಗಮ್ಮ ಮಿಯಾವ್ ಮಿಯಾವ್! ನಾನಿಲ್ಲಿ, ಬೆಕ್ಕು ಹೇಗೆ ಶಬ್ದ ಮಾಡುತ್ತದೆ ಎಂದು ಹೇಳುತ್ತಿಲ್ಲ. ಇದು ಆಸ್ಟ್ರೇಲಿಯಾದ ಪ್ರಜೆಯೊಬ್ಬನ ಹೆಸರು. 33 ವರ್ಷದ ಮಿಯಾವ್, ಕಳೆದ ವರ್ಷ ತನ್ನ ಹೆಸರಿನಷ್ಟೇ ವಿಚಿತ್ರ ಕೆಲಸ ಮಾಡಿದ್ದ. ನ್ಯೂಸೌಥ್‌ವೇಲ್ಸ್‌ನ ರೈಲಿನಲ್ಲಿ ಪ್ರಯಾಣಿಸಲು ಟಿಕೆಟ್ ಪಡೆಯದೆ

